# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 08/03/2022 ರಂದು ಬೆಳಿಗ್ಗೆ 11-00 ಗಂಟೆಗೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ಸಂಖ್ಯೆ:49 ಲಿಂಗರಾಜಪುರಕ್ಕೆ ಸಂಬಂಧಿಸಿದ ಸಭೆಯ ನಡಾವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.**

| ಹಾಜರಾಗಿದ್ದ ಅಧಿಕಾರಿಗಳು | ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು |
|---|---|
| 1. ಶ್ರೀ ಕೆ.ಚಂದ್ರಶೇಕರ್ (ಕಂದಾಯ ಅಧಿಕಾರಿ ಮಹದೇವಪುರ) ನೋಡಲ್ ಅಧಿಕಾರಿ – ಅಧ್ಯಕ್ಷರು<br>2. ಶ್ರೀ.ಹೆಚ್.ವಿ.ಕೃಷ್ಣಾರೆಡ್ಡಿ, ಕಾರ್ಯದರ್ಶಿ<br>3. ಶ್ರೀ.ವೆಂಕಟೇಶ್, ತೋಟಗಾರಿಕೆ ಅಧೀಕ್ಷಕರು<br>4. ಶ್ರೀ ಕೃಷ್ಣಮೂರ್ತಿ, ಕಂದಾಯ ಪರಿವೀಕ್ಷಕರು<br>5. ಶ್ರೀ.ಮಾರಪ್ಪ, ಆರೋಗ್ಯವೈದ್ಯಾಧಿಕಾರಿಗಳು<br>6. ಶ್ರೀ.ಕೆ.ಶ್ರೀರಾಮುಲು, ಎ.ಎಸ್.ಐ, ಬಾಣಸವಾಡಿ ಟ್ರಾಫೀಕ್ ಪೊಲೀಸ್ ಠಾಣೆ<br>7. ಶ್ರೀ.ಮಂಜುನಾಥ್ ಎನ್, ಬಾಣಸವಾಡಿ ಟ್ರಾಫೀಕ್ ಪೊಲೀಸ್ ಠಾಣೆ<br>8. ಶ್ರೀ.ವಿಜಯರಾಜ್ ಎಸ್, ವಾರ್ಡ್ ನಂ.49, ಕಿರಿಯ ಆರೋಗ್ಯ ಪರಿವೀಕ್ಷಕರು<br>9. ಶ್ರೀ.ಎಸ್.ಹೆಚ್.ಗುರುಪ್ರಸಾದ್, ಮಾರ್ಷಲ್<br>10. ಶ್ರೀಮತಿ.ತಿಲಗವತಿ, ಲಿಂಕ್ ವರ್ಕರ್,<br>11. ಶ್ರೀಮತಿ.ಶಾಹೀನ್‌ತಾಜ್, ಲಿಂಕ್ ವರ್ಕರ್ | 1. ಶ್ರೀ ಪಿ.ಜಯಶೀಲನ್, ಕೆ.ಎಸ್.ಎಫ್.ಸಿ<br>2. ಶ್ರೀ.ಉಮೇಶ್,<br>3. ಶ್ರೀ ವೀರಾಪಿಂಟೋ |

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ.49 ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ವಾರ್ಡ್ ಸಮಿತಿ ಸಭೆ ನಡೆಸಲು ಹೊಸದಾಗಿ ಲಿಂಗರಾಜಪುರ ಸರ್ಕಾರಿ ಪ್ರಾಥಮಿಕ ಶಾಲೆಯ 1ನೇ ಅಂತಸ್ತಿನಲ್ಲಿ ಕೊಠಡಿ ನೀಡಿದ್ದು, 1 ಟೇಬಲ್, ಹಾಗೂ 20 ಚೇರ್‌ಗಳನ್ನು ಮುಂದಿನ ಸಭೆಯೊಳಗಾಗಿ ಹೊಸದಾಗಿ ಖರೀದಿಸಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು

ಕೆ.ಎಸ್.ಎಫ್.ಸಿ ಲೇಔಟ್‌ನಲ್ಲಿ ರಸ್ತೆಗೆ ಡಾಂಬರೀಕರಣದ ಮುಂಚೆ ಮ್ಯಾನ್‌ಹೋಲ್‌ಗಳನ್ನು ಎತ್ತರಿಸಬೇಕು ಇನ್ನೂ ಡಾಂಬರೀಕರಣ ಪ್ರಾರಂಭವಾಗಿಲ್ಲ, 3 ವಾರ್ಡ್‌ಗಳಿಗೆ ಒಂದೇ ಪ್ಯಾಕೇಜ್ ಇದ್ದು, ಒಬ್ಬರೇ ಕಾಂಟ್ರ್ಯಾಕ್ಟರ್ ಆಗಿರುವುದರಿಂದ ವಾರ್ಡ್ 27 ಬಾಣಸವಾಡಿಯಲ್ಲಿ ಕಾಮಗಾರಿ ಮುಗಿದ ನಂತರ ಪ್ರಾರಂಭಿಸಲಾಗುವುದೆಂದು ಸಹಾಯಕ ಅಭಿಯಂತರರು ತಿಳಿಸಿದರು ಹಾಗೂ ಮುಂದಿನ ವಾರ ಪ್ರಾರಂಭಿಸಲಾಗುವುದು ಎಂದು ಸಹಾಯಕ ಅಭಿಯಂತರರು ತಿಳಿಸಿದರು.

**ಪು.ತಿ.ನೋ,**

Scanned with CamScanner

ರಸ್ತೆಗಳಲ್ಲಿ ಹಳೆಯ ವಾಹನಗಳನ್ನು ನಿಲ್ಲಿಸಿರುತ್ತಾರೆ ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಟ್ರಾಫೀಕ್ ಪೋಲೀಸ್ ರವರು ವಾಹನ ದಟ್ಟಣೆಯನ್ನು ಕ್ಲೀಯರ್ ಮಾಡಿರುವುದಿಲ್ಲ ಎಂದು ಸಮಿತಿ ಸದಸ್ಯರು ದೂರಿದರು.

ಹಳೆಯ ಗಾಡಿಗಳನ್ನು ಹಾಕಲು ಸ್ಥಳಾವಕಾಶ ಬೇಕು ಕೆ.ಎಸ್.ಎಫ್.ಸಿ ಲೇಔಟ್‌ನಲ್ಲಿ ನೋಪಾರ್ಕಿಂಗ್ ಬೋರ್ಡ್‌ಗಳನ್ನು ಹಾಕಬೇಕು ಬಿಡಾಡಿ ಗಾಡಿಗಳ ಸರ್ವೆ ಮಾಡಿದ್ದು, ಆರ್‌ಟಿಓ, ಪೋಲೀಸ್, ಬಿಬಿಎಂಪಿ ಸೇರಿ ಕಂಟ್ರ್ಯಾಕ್ಟರ್‌ಗೆ ವಹಿಸಲು ತೀರ್ಮಾನಿಸಲಾಗಿದೆ. ಈ ಬಗ್ಗೆ ಡಿ.ಸಿ.ಪಿ ರವರ ಹಂತದಲ್ಲಿ ಸಭೆ ನಡೆಸಲಾಗಿದ್ದು, ಈ ಬಗ್ಗೆ ಶೀಘ್ರದಲ್ಲಿ ಕ್ರಮ ವಹಿಸಲಾಗುವುದು ಎಂದು ಟ್ರಾಫೀಕ್ ಇನ್ಸ್‌ಪೆಕ್ಟರ್ ರವರು ಸಭೆಗೆ ತಿಳಿಸಿದರು.

**ಬೀದಿ ದೀಪ ನಿರ್ವಹಣೆ ಕುರಿತು:-**

ಕೆ.ಎಸ್.ಎಫ್.ಸಿ ಬಡಾವಣೆ ಹಾಗೂ ಇತರೆಡೆ ಬೀದಿ ದೀಪಗಳು ಉರಿಯುತ್ತಿಲ್ಲವೆಂದು ದೂರು ನೀಡಿದ್ದರೂ ಒಂದುವಾರವಾದರೂ ಸದರಿ ದೂರನ್ನು ಇತ್ಯರ್ಥಪಡಿಸಿರುವುದಿಲ್ಲವೆಂದು ಸಮಿತಿ ಸದಸ್ಯರು ತಿಳಿಸಿದರು. ಬೀದಿ ದೀಪಗಳನ್ನು ಸರಿಪಡಿಸಲು ಗುತ್ತಿಗೆದಾರರಿಗೆ ಸೂಚಿಸಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

**ಅರಣ್ಯ ಇಲಾಖೆ:-**

ಕೆ.ಎಸ್.ಎಫ್.ಸಿ ಬಡಾವಣೆಯ ರಸ್ತೆ ಬದಿಯ ಮರಗಳ ಕೊಂಬೆಗಳನ್ನು ತೆರವು ಮಾಡುವಾಗ ಸಂಬಂಧಪಟ್ಟ ಸಹಾಯಕ ಅರಣ್ಯ ಅಧಿಕಾರಿಗಳು ಪರಿಶೀಲನೆ ಮಾಡಬೇಕು ಗುತ್ತಿಗೆದಾರರ ಹುಡುಗರು ಬೇಜವಾಬ್ದಾರಿಯಾಗಿ ಮಾತಾಡುತ್ತಾರೆ ಎಂದು ಸಮಿತಿ ಸದಸ್ಯರು ತಿಳಿಸಿದರು. ಈ ಬಗ್ಗೆ ಸಹಾಯಕ ಅರಣ್ಯ ಅಧಿಕಾರಿಗಳಿಗೆ ಸೂಚಿಸಲು ಹಾಗೂ ಮುಂದಿನ ವಾರ್ಡ್ ಸಮಿತಿ ಸಭೆಗೆ ಹಾಜರಾಗುವಂತೆ ಸೂಚಿಸಲು ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು.

**ಆರೋಗ್ಯ ಇಲಾಖೆ:-**

ಕಸ ವಿಲೇವಾರಿ ಬಗ್ಗೆ ದೂರು ನೀಡಿದರೆ ಕೂಡಲೇ ಆರೋಗ್ಯ ಪರಿವೀಕ್ಷಕರು ಸ್ಪಂದಿಸುತ್ತಿದ್ದಾರೆ ಕಸದ ಸಮಸ್ಯೆ ಇರುವುದಿಲ್ಲ ಟಿಪ್ಪರ್‌ಗಳು ಮತ್ತು ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು ಇಬ್ಬರು ಆರೋಗ್ಯ ಮೇಲ್ವಿಚಾರಕರು ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ಶ್ರೀ.ಶ್ರೀನಿವಾಸ್, ಕಸವಿಲೇವಾರಿಯ ಮೇಲ್ವಿಚಾರಕರು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ದೂರುಗಳಿಗೆ ಸರಿಯಾಗಿ ಸ್ಪಂದಿಸುವುದಿಲ್ಲ, ಕೆಲಸಕ್ಕೆ ಸರಿಯಾಗಿ ಹಾಜರಾಗುವುದಿಲ್ಲ ಮತ್ತು ಸರಿಯಾಗಿ ಕಸ ವಿಲೇವಾರಿಯಾಗುತ್ತಿಲ್ಲ ಎಂಬುದಾಗಿ ಸದಸ್ಯರು ತಿಳಿಸಿದರು.

ಶ್ರೀಮತಿ.ಜ್ಯೋತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರು ಸ್ಪಂದಿಸುತ್ತಿಲ್ಲ. ಬಡಾವಣೆಗಳಲ್ಲಿ ಸಾರ್ವಜನಿಕರು ಕಸವನ್ನು ಟಿಪ್ಪರ್ ಗಾಡಿಗೆ ಹಾಕುತ್ತಿಲ್ಲ ಮನೆ ಮುಂದೆ ಇಟ್ಟಿರುತ್ತಾರೆ. ಪೌರಕಾರ್ಮಿಕರು ಕಸವನ್ನು ತೆಗೆಯಬೇಕು ಸ್ಥಳದಲ್ಲಿ ಕ್ಯಾಮೆರಾ ಅಳವಡಿಸಲಾಗಿದ್ದರೂ ಕಸವನ್ನು ರಸ್ತೆಗೆ ಎಸೆಯುತ್ತಾರೆ ಈ ಬಗ್ಗೆ ಪ್ರಶ್ನಿಸಿದರೆ ಅನಗತ್ಯವಾಗಿ ಆಯುಕ್ತರಿಗೆ ಸುಳ್ಳು ದೂರು ದಾಖಲಿಸುತ್ತಾರೆ.

**ಮು.ತಿ.ನೋ,**

Scanned with CamScanner

ಶ್ರೀಮತಿ.ಜ್ಯೋತಿ, 9480688504, ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರು ಮುಂದಿನ ಸಭೆಗೆ ಹಾಜರಾಗುವಂತೆ ಸೂಚಿಸಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

ರಸ್ತೆಗಳಲ್ಲಿ ಕಸವನ್ನು ಹಾಕುವವರಿಗೆ ದಂಡ ವಿಧಿಸಲು ಹಾಗೂ ದಂಡ ಪಾವತಿಸದೇ ಇದ್ದಲ್ಲಿ ಹಾಗೂ ಪೌರಕಾರ್ಮಿಕರೊಂದಿಗೆ ಅಸಭ್ಯವಾಗಿ ವರ್ತಿಸುವವರ ವಿರುದ್ಧ ಪೋಲೀಸ್ ಠಾಣೆಯಲ್ಲಿ ದೂರು ನೀಡಬೇಕು, ಹಾಗೂ ಖಾಲಿ ನಿವೇಶನಗಳಲ್ಲಿ ಕಸ ಹಾಕುತಿದ್ದು, ಖಾಲಿ ನಿವೇಶನಗಳ ಮಾಲೀಕರ ದೂರವಾಣಿ/ಮೊಬೈಲ್ ಸಂಖ್ಯೆಗಳನ್ನು ಆರೋಗ್ಯ ಪರಿವೀಕ್ಷಕರಿಗೆ ಮತ್ತು ವಾರ್ಡ್‌ನ ಕಂದಾಯ ಪರಿವೀಕ್ಷಕರಿಗೆ ಸೂಚಿಸಲಾಯಿತು.

ಸಭೆಯು 12-00 ಗಂಟೆಗೆ ನೋಡಲ್ ಅಧಿಕಾರಿಗಳ ಹಾಗೂ ಸಮಿತಿ ಸದಸ್ಯರ ಒಮ್ಮತದ ತೀರ್ಮಾನದಂತೆ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.

-sd-
ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-49 ಲಿಂಗರಾಜಪುರ

08.03.22
ಅಧ್ಯಕ್ಷರು ವಾರ್ಡ್ ಸಮಿತಿ
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-49 ಲಿಂಗರಾಜಪುರ

ಪ್ರತಿಯನ್ನು,

1. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
3. ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ಟ್ರಾಫೀಕ್ ಪೋಲೀಸ್ ಠಾಣೆ ಬಾಣಸವಾಡಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾರುತಿ ಸೇವಾನಗರ ರವರ ಮಾಹಿತಿಗಾಗಿ ರವಾನಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾರುತಿಸೇವಾನಗರ ವಿಭಾಗ ರವರ ಮಾಹಿತಿಗಾಗಿ ರವಾನಿಸಿದೆ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬಿಡಬ್ಲ್ಯೂಎಸ್ಎಸ್‌ಬಿ ರವರ ಅವಗಾಹನೆಗೆ ರವಾನಿಸಿದೆ.
8. ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
9. ಕಛೇರಿ ಕಡತಕ್ಕೆ.

Scanned with CamScanner